# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 263 (494)
ಸದಸ್ಯರ ಹೆಸರು : ಶ್ರೀ ಎನ್. ಅಪ್ಪಾಜಿಗೌಡ
ಉತ್ತರಿಸುವ ದಿನಾಂಕ : 23-09-2020
ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಮಾಜ ಕಲ್ಯಾಣ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮಂಡ್ಯ ಜಿಲ್ಲಾ ಹಾಗೂ ತಾಲ್ಲೂಕಿನ ಕೀಲಾರ ಗ್ರಾಮದಲ್ಲಿ ಅರೆಕಲ್ಲು ಪ್ರದೇಶದಲ್ಲಿ ಗುಡಿಸಲುಗಳು ಬೆಂಕಿಗಾಹುತಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಅವಘಡಕ್ಕೆ ಕಾರಣಗಳೇನು; | ಹೌದು<br>ದಿನಾಂಕ:09.06.2020ರಂದು ಮಂಗಳವಾರ ಮಧ್ಯಾಹ್ನ 2.00 ಗಂಟೆ ಸಮಯದಲ್ಲಿ ಆಕಸ್ಮಿಕವಾಗಿ ಬೆಂಕಿ ತಗುಲಿ ಮಂಡ್ಯ ಜಿಲ್ಲೆ ಹಾಗೂ ತಾಲ್ಲೂಕಿನ ಕೀಲಾರ ಗ್ರಾಮದಲ್ಲಿ ಅರೆಕಲ್ಲು ಪ್ರದೇಶದಲ್ಲಿ ಗುಡಿಸಲುಗಳು ಬೆಂಕಿಗಾಹುತಿಯಾಗಿರುತ್ತವೆ. |
| ಆ) | ಈ ಅವಘಡದಿಂದ ಸಂತ್ರಸ್ಥಗೊಂಡ ಕುಟುಂಬಗಳು ಎಷ್ಟು; (ವಿವರವಾದ ಮಾಹಿತಿ ನೀಡುವುದು) | ಈ ಅವಘಡದಿಂದ ಸಂತ್ರಸ್ಥಗೊಂಡ ಕುಟುಂಬಗಳ ಸಂಖ್ಯೆ: 09 ವಿವರಗಳು ಕೆಳಕಂಡಂತಿದೆ.<br>1. ಧರ್ಮಲಿಂಗ ಬಿನ್ ಸಿ.ವೇಲು.<br>2. ಎಣ್ಣಮಲ್ಲೈ ಬಿನ್ ಅಮ್ಮಕುಟ್ಟಿ.<br>3. ಮುನಿಯಮ್ಮ ಕೋಂ ಅಮ್ಮಕುಟ್ಟಿ.<br>4. ರಾಮೊಯಿ ಕೋಂ ರಮೇಶ.<br>5. ಪಡಿಮಾ ಬಿನ್ ನಾರಾಯಣ.<br>6. ವಿಜಯಲಕ್ಷ್ಮಿ ಕೋಂ ವೇಲು.<br>7. ಕಾಮಾಕ್ಷಿ ಕೋಂ ಅಣ್ಣಾದೊರೆ.<br>8. ಮುನಿಯಪ್ಪ ಬಿನ್ ಮುತ್ತುಸ್ವಾಮಿ.<br>9. ಗಂಗಾ ಕೋಂ ನಾಗರಾಜು. |
| ಇ) | ಸದರಿ ಸಂತ್ರಸ್ಥ ಬುಡಕಟ್ಟು ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸಿ ಕೊಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; | ಸದರಿ ಸಂತ್ರಸ್ಥ ಬುಡಕಟ್ಟು ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸಿಕೊಡಲು ಜಿಲ್ಲಾಧಿಕಾರಿಗಳು, ಮಂಡ್ಯ ರವರ ಅಧಿಕೃತ ಜ್ಞಾಪನ ಸಂಖ್ಯೆ:ಎಲ್‌ಎನ್‌ಡಿ(1)67/2019-20, ದಿನಾಂಕ:29-07-2019ರಂತೆ ಇವರು ಆಶ್ರಯ ಯೋಜನೆಯಡಿ ನಿವೇಶನ ಹಂಚಲು ಗ್ರಾಮದ ಸ.ನಂ.20ರ 06.15 ಎಕರೆ ಸರ್ಕಾರಿ ಜಮೀನಿನ ಪೈಕಿ 0.20 ಗುಂಟೆ ಜಮೀನನ್ನು ಕಾಯ್ದಿರಿಸಿ ಆದೇಶಿಸಲಾಗಿದ್ದು, ಸದರಿ ನಿವೇಶನಗಳ ಹಂಚಿಕೆ ಜಾಗಕ್ಕೆ ಸಂಬಂಧಿಸಿದಂತೆ ಗ್ರಾಮದ ನಾಗೇಶ, ಸೋಮೇಶ, ವೀರಪ್ಪ ಮತ್ತು ಬೋರಪ್ಪ ರವರು ಮಂಡ್ಯ ಸಿವಿಲ್ ನ್ಯಾಯಾಲಯದಲ್ಲಿ ಒ.ಎಸ್:96/2020 ಹಾಗೂ 98/2020 ರಂತೆ ದಾವೆ ದಾಖಲಿಸಲಾಗಿ, ಘನ ನ್ಯಾಯಾಲಯವು ದಿನಾಂಕ: 29-02-2020 ರಂದು ತಾತ್ಕಾಲಿಕ ತಡೆಯಾಜ್ಞೆ ಹೊರಡಿಸಿರುತ್ತದೆ. |
| ಈ) | ಯಾವ ಕಾಲಮಿತಿಯೊಳಗೆ ಇವರಿಗೆ ಪುನರ್ವಸತಿ ಕಲ್ಪಿಸಿಕೊಡಲಾಗುವುದು? | ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕೀಲಾರ ಗ್ರಾಮ ಪಂಚಾಯತಿ, ಮಂಡ್ಯ ತಾಲ್ಲೂಕು ರವರಿಗೆ ನ್ಯಾಯಾಲಯದಲ್ಲಿ ಪ್ರಕರಣವು ಇತ್ಯರ್ಥವಾದ ಕೂಡಲೇ ಸಂಸತ್ರಸ್ತರಿಗೆ ಪುನರ್ವಸತಿ ಕಲ್ಪಿಸಲು ನಿರ್ದೇಶನ ನೀಡಲಾಗಿದೆ. |

ಸಕಇ 267 ಎಸ್‌ಟಿಪಿ 2020

**(ಗೋವಿಂದ ಎಂ. ಕಾರಜೋಳ)**
ಉಪ ಮುಖ್ಯಮಂತ್ರಿಗಳು ಹಾಗೂ ಸಮಾಜ ಕಲ್ಯಾಣ ಸಚಿವರು